# ಚೈತ್ರದ ಚಿಗುರು



ಚೈತ್ರದ ಚಿಗುರು ಯಾರ ಪಾಲಿಗೆ ಉಸಿರು ನೀಡುತ್ತದೆ? 'ಪವರ್' ಇರುವವರಿಗೋ, ಅಲೆಮಾರಿಗಳಿಗೊ? ಇದು, ನಗೆಯದೋಣಿಯಲ್ಲಿ ತೇಲಿಬರುತ್ತಿರುವ ವಿಷಾದದ ಹಾಯಿದೋಣಿ.

**■ ಜೆ.ವಿ. ಅರುಣ**

ಚಳಿಗಾಲದ ಬೆಳಗಿನ ಸೋಮಾರಿತನವನ್ನು ಕೊಡವಿಕೊಂಡು, ಮಂಜು ಹೊಂಜುಗಳನ್ನು ಮಾಯಮಾಡಿ, ಚುಮುಚುಮು ಬಿಸಿಲಿನ ಲವಲವಿಕೆಯನ್ನು ಪ್ರಕೃತಿಯು ಭೂಮಿಗೆ ತಂದುಬಿಟ್ಟಿದೆ. ಉದ್ಯಾನದಲ್ಲಿ ನನ್ನ ಬೆಳಗಿನ ವಾಯುವಿಹಾರ ಆಹ್ಲಾದಕರವಾಗಿತ್ತು. ಒಣಗಿದ ಎಲೆಗಳನ್ನು ಕಳಚುತ್ತಾ ಮರಗಳು ಚೈತ್ರದ ಚಿಗುರಿಗೆ ಸಿದ್ಧವಾಗುತ್ತಿದ್ದವು. ಬೀಳುತ್ತಿರುವ ಎಲೆಗಳ ಜೊತೆಗೆ ಹಿತವಾದ ನೇಸರನ ಕಿರಣ ನಮ್ಮನ್ನು ತಡವುತ್ತಿದ್ದವು. ವಿಟಮಿನ್ ಪ್ರಿಯರಿಗೆ ಅಂದಿನ 'ಡಿ' ವಿಟಮಿನ್ ದಕ್ಕಿದ ಸಂತೋಷ ಮುಖದ ಮೇಲಿತ್ತು.

ಬಲಭುಜದ ಮೇಲೆ ರಪ್ ಎಂದು ಬಿದ್ದ ಹೊಡೆತಕ್ಕೆ, ತಕ್ಷಣ ಗಾಬರಿಯಿಂದ ತಿರುಗಿ ನೋಡಿದೆ. 'ಇಂಗ್ಲಿಷ್ ಅಣ್ಣ' ಮುಗುಳು ನಗುತ್ತ – 'ಏನ್ ಬ್ರದರ್! ಶೇಕ್‌ಹ್ಯಾಂಡ್ ಮಾಡಬಾರದು ಅಂತ ಹೇಳಿರೋದು. ಭುಜ ತಟ್ಟಬಾರ್ದು ಅಂತ ಹೇಳಿಲ್ಲ' ಎಂದರು. ಹೆಚ್ಚು ಇಂಗ್ಲಿಷ್ ಶಬ್ದಗಳನ್ನು ಉಪಯೋಗಿಸಿ ಮಾತನಾಡುವ ಅವರನ್ನು ನಾವೆಲ್ಲ ಇಂಗ್ಲಿಷ್ ಅಣ್ಣ ಅಂತಲೇ ಕರೆಯುವುದು. ಈಗ ಅವರ ಹೆಸರೇ ಮರೆತುಹೋಗಿದೆ. ಅವರ



